<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.</u>

## <u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 616/2022</u> .

ಪ್ರಾ.ಸಾ. : 1
ಚಾ.ಸಾ. : 2

| | | |
|---|---|---|
| ಹೆಸರು | : | ನಿದೀನ್ |
| ತಂದೆಯ ಹೆಸರು | : | ಅಬ್ರಹಾಂ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಮ್ಯಾನೇಜರ್ |
| ವಿಳಾಸ | : | ಕೊಚ್ಚಿನ್, ಕೇರಳ |

... ........................................................................................................ ...

ದಿನಾಂಕ 19 ನೇ ಡಿಸೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ</u>- <u>ಮಾನ್ಯ ಸ ಸ ಅ ರವರಿಂದ</u> : -

2016 ರಲ್ಲಿ ಕೊಡಗು ಜಿಲ್ಲೆಯ ನಬಾರ್ಡ್ ಬ್ಯಾಂಕ್ ಮ್ಯಾನೇಜರ್ ಆಗಿ ಕೆಲಸ ಮಾಡಿದ್ದೇನೆ. ಮಹಾತ್ಮ ಗಾಂಧಿ ಟ್ರಸ್ಟ್ ನ ಟ್ರಸ್ಟಿ ಚಾಸಾ 1 ರವರ ಮೂಲಕ ಆರೋಪಿ ರಾಮಚಂದ್ರ ರವರು ಏಜೆಂಟ್ ಆಗಿ ನಬಾರ್ಡ್ ಸಂಸ್ಥೆಯ ಪರವಾನಗಿ ಸಾರ್ವಜನಿಕರಿಂದ ಹಣವನ್ನು ವಸೂಲಿ ಮಾಡುತ್ತಿದ್ದರು ಅದನ್ನು ನಮ್ಮ ಸಂಸ್ಥೆ ಪಾವತಿಸದೆ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದರು. ಈ ಬಗ್ಗೆ ನನಗೆ ಅನುಮಾನ ಬಂದು ಪರಿಶೀಲಿಸಲೆಂದು ಕೊಡಗಿನ ಕೆಲವು ಗ್ರಾಹಕರ ಬಳಿ ವಿಚಾರಿಸಿದಾಗ ಅವರು ಹಣವನ್ನು ರಾಮಚಂದ್ರ ರವರ ಬಳಿ ನೀಡಿರುವುದಾಗಿ ತಿಳಿಸಿದರು ಆದರೆ ಸದರಿ ಹಣ ನಮ್ಮ ಸಂಸ್ಥೆ ಡಿಪಾಸಿಟ್ ಆಗಿರುವುದಿಲ್ಲ. ರಹೀಂ, ಆಸಿಕ್, ರಾಜೇಶ್ ಹಾಗೂ ರಾಮಚಂದ್ರರವರು ಸೇರಿ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ನನಗೆ ತಿಳಿಯಿತು. ಆ ನಂತರ ಸದರಿ ವಿಚಾರವನ್ನು ನನ್ನ ಮೇಲಾಧಿಕಾರಿಗೆ ತಿಳಿಸಿದ್ದೇನೆ. ಆ ನಂತರ ನನ್ನ ಮೇಲಾಧಿಕಾರಿಗಳು ಚಾಸಾ 1 ರವರಿಗೆ ಈ ಬಗ್ಗೆ ತಿಳಿಸಿದರು. ಆಗ ಚಾಸಾ 1 ರವರು ಆರೋಪಿತರ ವಿರುದ್ಧ ಈ ದೂರನ್ನು ಸಲ್ಲಿಸಿದ್ದಾರೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ನಾನು ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲು** :- ಆರೋಪಿ ರವರಿಂದ :-

ಆರೋಪಿ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ** :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)